ರೆವಿನ್ಯೂ ಸರ್ವೇ ವ ಸೆಟಲ್‌ಮೆಂಟ್ ಇಲಾಖಾ.

ತಾರೀಖು 2ನೇ ಅಕ್ಟೋಬರ್ 1876.

ಮೈಸೂರು ರೆವಿನ್ಯೂ ಸರ್ವೆ ಸೂಪರ್‌ಟಿಂಡೆಂಟ್ ಮೇಜರ್ ಗ್ರಾಂಟ್ ಸಾಹೇಬರು ಆಫಿಷಿಯೇಟಿಂಗ್ ಸೂಪರ್‌ಟೆಂಡೆಟ್ ಮೇಜರ್ ಆಂಡರ್‌ಸನ್ ಯವರಿಗೆ 1876ನೇ ಸೆಪ್ಟಂಬರ್ 25ನೇ ಮಧ್ಯಾನ್ಹದಲ್ಲಿ ತಮ್ಮ ಆಫಿಸ್ ಚಾರ್ಜನ್ನು ಕೊಟ್ಟರು.

ನಂ. ತಾರೀಖು 2ನೇ ಅಕ್ಟೋಬರ್ 1876.

ಮೈಸೂರು ರೆವಿನ್ಯೂ ಸರ್ವೆ ಸೂಪರ್‌ಟಿಂಡೆಂಟ್ ಮೇಜರ್ ಗ್ರಾಂಟ್ ಸಾಹೇಬರು, 1876ನೇ ಸೆಪ್ಟಂಬರ್ 15ನೇ ಮರುಮಿನ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆ ಪ್ರಕಾರ ಕೊಡಲ್ಪಟ್ಟ 3 ತಿಂಗಳ ಪ್ರಿವಿಲೀಜ್ ರಜಾವನ್ನು ಅದೇತಿಂಗಳು 25ನೇ ತಾರೀಕ ಪೂರ್ವಾನ್ಹದಲ್ಲಿ ಉಪಯೋಗಿಸಿಕ್ಕೊಂಡರು.

ನಂ. ತಾರೀಖು 2ನೇ ಅಕ್ಟೋಬರ್ 1876.

ಮೇಜರ್ ಆಂಡರ್‌ಸನ್ ಯವರು ಮೈಸೂರು ರೆವಿನ್ಯೂ ಸರ್ವೆ ಡಿಪ್ಟಿ ಸೂಪರ್‌ಟಿಂಡೆಂಟ್ ಆಫಿಸ್ ಚಾರ್ಜನ್ನು ಕೆಪ್ಟನ್ ಜಿ. ಮೆಕ್ಕಂಜಿ ಯವರಿಗೆ 1876ನೇ ಇಸವೀ ಶಪ್ಟಂಬರು 25ನೇ ಮಧ್ಯಾನಕ್ಕೆ ಪೂರ್ವ ಕೊಟ್ಟರು.

W. C. ANDERSON,
Survey & Settlement Commr., Mysore.

ಇನಾಂ ಇಲಾಖಾ.

ನಂ. 6. ತಾರೀಖು 3ನೇ ಅಕ್ಟೋಬರ್ 1876.

ಬಂಗಳೂರು ಡಿಸ್ಟ್ರಿಕ್ಟು ದೊಡ್ಡಬಳ್ಳಾಪುರದ ತಾಲ್ಲೂಕಿನಲ್ಲಿ ಯಿರುವ ಇನಾಂಗಳ ಸಲುವಳಿಯ ವಿಚಾರಣೆಯು ಸದರೀ ತಾಲ್ಲೂಕು ಕಸಬೇಯಲ್ಲಿ ಇನಾಂ ಸೆಟಲ್‌ಮೆಂಟ್ ಅಸಿಸ್ಟೆಂಟ್ ಸೂಪರ್‌ಟಿಂಡೆಂಟ್ ಮೆಸ್ಸರ್ ಶ್ರೀನಿವಾಸೈಯಂಗಾರಿಂದ ನಡಿಸಲ್ಪಟ್ಟು 1876ನೇ ನವಂಬರ್ 1ನೇ ಮಧ್ಯಾನ್ನಲ್ಲಿ ಷುರು ಮಾಡಲ್ಪಡುವದು.

2. ಸದರೀ ತಾಲ್ಲೂಕಿನಲ್ಲಿ ಯಿರುವ ಯಿನಾಂಗಳೊಳಗೆ ಸಂಬಂಧವುಳ್ಳ ದರೋಬಸ್ತು ಜನಗಳೂ, ರೂಬರೂ ಯಾ ತಮ್ಮ ಮುಖ್ತಾಲೀಕರ ಮೂಲಕ ಹಾಜರಾಗಿ ತಮ್ಮತಮ್ಮ ಹಕ್ಕುದಾರೀಗಳನ್ನು ಸ್ಥಾಪಿಸಿ ತಮ್ಮಲ್ಲಿರುವ ಸನ್ನದ್‌ಗಳು ವ ಯಿತರ ದಸ್ತಾವೇಜುಗಳು ಯಿವುಗಳನ್ನು ಹಾಜರ್‌ಮಾಡಬೇಕೆಂದು ನಿಯಮಿಸಲ್ಪಡುತ್ತಾರೆ, ಹಾಗೆ ಮಾಡದೆ ತಪ್ಪಿದ ಪಕ್ಷಕ್ಕೆ ಅವರ ಯಿನಾಂಗಳು ಪ್ರಥಮತಃ ಜಪ್ತ್‌ಮಾಡಲ್ಪಟ್ಟು ತರುವಾಯ ಕೈವಟ್ಟಿಗೆ ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ.

R. A. COLE,
Supt. of Inam Settlements.

ಸ್ಟೇಟ್ ವ ಡಿಸ್ಟ್ರಿಕ್ಟು ಫಾರೆಸ್ಟ್ಸ್ ರೆವಿನ್ಯೂ ವಿಷಯ.

ಸರ್ಕ್ಯುಲರ್ ನಂಬರ್ 1292, ತಾರೀಖು 28ನೇ ಶಪ್ಟಂಬರ್ 1876.

ಡೆಪ್ಯೂಟಿ ಕಮ್ಮಿಷನರ್‌ಗಳು, ಡಿಸ್ಟ್ರಿಕ್ಟು ಟ್ರೆಜರೀ ಆಫಿಸರ್‌ಗಳು, ವ ಅಮಲ್‌ದಾರ್‌ಗಳು ಯಿವರುಗಳಿಗೆ.

ಜಂಗ್ಲೀ ಬಾಬಿನ ಜಮೇ ಯನ್ನು ಕುರಿತು ಹುಟ್ಟಿದ 1873ನೇ ಇಸವಿ ಏಪ್ರಿಲ್ 26ನೇ ಮಧ್ಯಾಂ 998ನೇ ನಂಬರ್ ಅಕ್ಕೌಂಟೆಂಟ್ ಜನರಲ್ಲವರು ತಿಳಿಸುವದೇನಂದರೆ, ಚೀಫ್ ಕಮ್ಮಿಷನರವರು 1876ನೇ ಇಸವಿ 22ನೇ ಮಧ್ಯಾಂ 5181—900ನೇ ನಂಬರ್ ಪ್ರೊಸೀಡಿಂಗ್ಸ್‌ನಲ್ಲಿ, ಫಾರೆಸ್ಟ್ ಯಿಲಾಖಾ ವಿಚಾರಣೆಯಲ್ಲಿ ಜಂಗ್ಲೀ ಹುಟ್ಟುವಳೀ ಬಾಬತು ಸರ್ಕಾರಕ್ಕೆ ಬರತಕ್ಕದ್ದು, ವಸೂಲು, ಬಾಕಿ ಯಿವುಗಳನ್ನು ಕುರಿತು ನಂಬರ್ 24ನೇ ಮತ್ತು ಡಿಸ್ಟ್ರಿಕ್ಟು ಫಾರೆಸ್ಟ್ಸಿಗಾಗಿ ನಂಬರ್ 25ನೇ ಪರಿಷ್ಕರಿಸೋಣಾದ ನಮೂನೇಗಳನ್ನು ಮಂಜೂರ್ ಮಾಡಿರುತ್ತಾರೆ. ಫಾರೆಸ್ಟ್ ಅಸಿಸ್ಟೆಂಟ್ ಕನ್‌ಸರ್‌ವೇಟರ್‌ಗಳಿಂದಾಗಲಿ, ಡಿಸ್ಟ್ರಿಕ್ಟು ಡಿಪ್ಯೂಟಿ ಕಮ್ಮಿಷನರ್‌ಗಳಿಂದಾಗಲಿ, ಮೊಬಲಗ್ ಬಂದಲ್ಲಿ ಸದರೀ ನಮೂನೇಗಳಲ್ಲಿ ತೋರಿಸಲ್ಪಟ್ಟ ಆ ಮೊಬಲಗಿಗೆ ಡಿಸ್ಟ್ರಿಕ್ಟು ಟ್ರೆಜರೀ ಆಫಿಸರ್‌ಗಳು ಮಾಮೂಲ್ ಮೇರೆ ಸರ್ಟಿಫೈ ಮಾಡತಕ್ಕದ್ದೆಂದು ಕೋರಲ್ಪಡುತ್ತಾರೆ.

2. (ಸ್ಟೇಟ್ ಫಾರೆಸ್ಟಿನ ಬಾಬತು) 24ನೇ ನಂಬರ್ ಸ್ಟೇಟ್‌ಮೆಂಟಿಗೆ ಸಂಬಂಧಿಸಿದ ಮೊಬಲಗ್, 998ನೇ ಅಕ್ಕೌಂಟ್ ಸರ್ಕ್ಯುಲರಿನ 1, 2ನೇ ನಿಬಂಧನೆಗಳಲ್ಲಿ ವಿಧಿಸಲ್ಪಟ್ಟ ಮೇರೆ ಫಾರೆಸ್ಟು ಆಫಿಸರಿಂದ ಅಡ್ವೈಸ್‌ಗಳು ಬಂದಮೇಲೆಯೇ ಜಮೆ ಯಿಡಲ್ಪಡುವದು. ಡಿಸ್ಟ್ರಿಕ್ಟು ಫಾರೆಸ್ಟುಗಳ ಬಾಬತು 25ನೇ ನಂಬರಿಗೆ ಸೇರಿದ ಮೊಬಲಗ್‌ಗಳು, ಅದೇ ಸರ್ಕ್ಯುಲರಿನ 5ನೇ ರೂಲ್ ಪ್ರಕಾರ